ಶ್ರೀ ಬಿ. ರಾಚಯ್ಯ.—ಸೀಜ್ ಮಾಡಿರತಕ್ಕ ರಿವಾಲ್ವಾರ್ ಮತ್ತು ಗನ್‌ಗಳನ್ನು ಮಾರಿರತಕ್ಕದ್ದು ನಾಲ್ಕು ವರ್ಷಗಳ ಹಿಂದೆ. ಅದು ಈಚೆಗೇ ಬಂದಿರಲಿಲ್ಲ. ಅದು ಈಚೆಗೇ ಬೆಳಕಿಗೆ ಬಂದಿದೆ. ನಾವು ಓಡಿದು ಕೇಸ್ ಹಾಕುತ್ತಿದ್ದೇವೆ ಎಂದು ಹೇಳುತ್ತಿದ್ದೇನೆ. ಇವರು (ವಿರೋಧ ಪಕ್ಷದವರಿಗೆ) ಹಿಂದೆ ಮಾಡಿರುವುದಕ್ಕೆಲ್ಲಾ ನಮ್ಮನ್ನೇ ಹೊಣೆ ಮಾಡುವುದಕ್ಕೆ ಪ್ರಯತ್ನ ಪಡುತ್ತಾರೆ.

ಶ್ರೀ ಆರ್. ಎನ್. ನಾಯಕ್.—ಇಲ್ಲ.

ಅಧ್ಯಕ್ಷರು.—ಡಿಮ್ಯಾಂಡ್ ವೇಲೆ ಮಾತನಾಡುವಾಗ ಚೆನ್ನಾಗಿ ಮಾತನಾಡಿ. ಈಗ ಕುಳಿತು ಕೊಳ್ಳಿ.

ಶ್ರೀ ಎಸ್. ಕೆ. ಕಾಂತಾ.—ಅಲ್ಲಿ ಸೆಂಟ್ರಿ ಇರುತ್ತಾರೆ. ಅಧಿಕಾರಿಗಳು ಇರುತ್ತಾರೆ. ೮೦ರಷ್ಟು ಆಪರೇಷನ್ ಕಳುವಾಗುತ್ತಿದೆ ಎಂದರೆ ಇದು ಹೇಗಾಗುತ್ತಿದೆ ಎಂಬುದನ್ನು ವಿಚಾರ ಮಾಡಬೇಕಾದುದು ಅಗತ್ಯ. ಯಾವರೀತಿ ವಿಚಾರಣೆ ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಬಿ. ರಾಚಯ್ಯ.—ಇದು ಗಂಭೀರವಾದ ವಿಚಾರ. ಎನ್‌ಕ್ವೈರಿ ಮಾಡಿಸಿ ತಪ್ಪಿತಸ್ಥರನ್ನು ಶಿಕ್ಷೆ ಮಾಡುವುದಕ್ಕೆ ಎಲ್ಲ ರೀತಿಯ ಕ್ರಮಗಳನ್ನೂ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನಿಮ್ಮ ಹತ್ತಿರ ಏನು ಇನ್‌ಫರ್ಮೇಷನ್ ಇದ್ದರೂ ಪಾಸ್‌ಆನ್ ಮಾಡಿ.

(ii) ಎಸ್.ಸಿ. ಮತ್ತು ಎಸ್.ಟಿ. ಎಂ.ಬಿ.ಬಿ.ಎಸ್. ಪದವೀಧರರ ಹುದ್ದೆಯಂನ್ನು ಖಾಯಂಗೊಳಿಸುವ ಬಗ್ಗೆ

SRI B. BASAVALINGAPPA.—Sir, I call the attention of the Minister for Health to the regularisation of the services of M.B.B.S. Graduates belonging to SC and ST.

ಶ್ರೀ ಎಚ್. ಎಲ್ ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—ಈಗ ಹಾಲಿ ೩೧೦ ಮಂದಿ ಎಂ. ಬಿ ಬಿ. ಎಸ್. ಪದವೀಧರರು ಸ್ಥಳೀಯ ಅಭ್ಯರ್ಥಿಗಳಾಗಿ (ಸಹ ಶಸ್ತ್ರ ಚಿಕಿತ್ಸಕ ಹಾಗೂ ಸಹಾಯಕ ವೈದ್ಯಾಧಿಕಾರಿ) ಸರ್ಕಾರಿ ಸೇವೆಯಲ್ಲಿದ್ದಾರೆ. ಇವರಲ್ಲಿ ೧೪೮ ಮಂದಿ ಅನುಸೂಚಿತ ಜಾತಿ ಮತ್ತು ೫೫ ಮಂದಿ ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿದ್ದಾರೆ. ಈ ೩೧೦ ಮಂದಿಯಲ್ಲಿ ೨೧ ಜನರು ರೆಗುಲರ್ ವೇತನದಲ್ಲಿ ಕೆಲಸಮಾಡುತ್ತಿದ್ದಾರೆ. ಮಿಕ್ಕ ೨೮೯ ಜನರು ನಿಗದಿ ಪಡಿಸಿದ ರೂ. ೧೧೯೦-೦೦ ಸಂಚಿತ ವೇತನ ಪಡೆಯುತ್ತಿದ್ದಾರೆ. ಈ ೨೮೯ ವೈದ್ಯರ ಸೇವೆಯನ್ನು ಪ್ರತಿ ೯ ತಿಂಗಳಿಗೊಮ್ಮೆ ಮುಂದುವರಿಸಲಾಗುತ್ತಿದೆ. ಇವರಲ್ಲಿ ಮಾಮೂಲಿವೇತನ ಪಡೆಯುತ್ತಿದ್ದು ಕೆಲವರು ೭ ವರ್ಷದಿಂದ ಹಾಗೂ ಕೆಲವರು ೨೦ ವರ್ಷದಿಂದ ಈ ಹಂಗಾಮಿ ಕೆಲಸದಲ್ಲಿ ಇದ್ದಾರೆ. ಕನ್‌ಸಾಲಿಡೇಟೆಡ್ ವೇತನ ಪಡೆಯುತ್ತಿರುವವರು ೩ ವರ್ಷದಿಂದ ೭ ವರ್ಷಗಳವರೆಗೆ ಈ ಹಂಗಾಮಿ ಕೆಲಸದಲ್ಲಿ ಕರ್ತವ್ಯ ನಿರತರಾಗಿದ್ದಾರೆ.

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ೩೪ ಮಂದಿ ಸ್ಥಳೀಯ ಉಪನ್ಯಾಸಕರು ಇದ್ದಾರೆ. ಇವರಲ್ಲಿ ೧೬ ಜನ ಪರಿಶಿಷ್ಟ ಜಾತಿ ಮತ್ತು ಒಬ್ಬರು ಪರಿಶಿಷ್ಟ ವರ್ಗದವರಿದ್ದಾರೆ.

ಈಗಾಗಲೇ ಇವರ ಕೆಲಸವನ್ನು ಖಾಯಂಗೊಳಿಸುವ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ ಪ್ರಕಾರ ಮೂರು ವರ್ಷಗಳಿಂದ ೨೦ ವರ್ಷಗಳ ಪರ್ಯಂತ ಹಂಗಾಮಿಯಾಗಿ ಕೆಲಸ ಮಾಡತಕ್ಕ ಡಾಕ್ಟರುಗಳು ಈ ಇಲಾಖೆಯಲ್ಲಿದ್ದಾರೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇಷ್ಟು ದಿವಸಗಳ ಪರ್ಯಂತ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಮುಂದುವರೆಸುವುದಕ್ಕೆ ನಮಗೆ ಅಧಿಕಾರ ಇದೆಯೋ ಇಲ್ಲವೇ ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ ಇಲಾಖೆಯಲ್ಲಿ ಡಾಕ್ಟರುಗಳ ಹುದ್ದೆಗಳು ಎಷ್ಟಿವೆ ? ಅದರಲ್ಲಿ ಅನುಸೂಚಿತ ಜಾತಿಗೆ ಸೇರಿರತಕ್ಕವರು ಎಷ್ಟು ಮಂದಿ ನೇಮಕವಾಗಿದ್ದಾರೆ ? ಮೂರನೆಯದು, ಖಾಲಿ ಹುದ್ದೆಗಳು ಇಲಾಖೆಯಲ್ಲಿ ಇವತ್ತು ಎಷ್ಟಿವೆ ? ೧೯೭೮ನೇ ಇಸವಿಯಲ್ಲಿ

ಹಂಗಾಮಿಯಾಗಿ ಸರ್ವೀಸ್‌ನಲ್ಲಿ ಅನುಸೂಚಿತ ಜಾತಿಗೆ ಸೇರಿದ ಡಾಕ್ಟರುಗಳೇನಿದ್ದಾರು ಅವರೆಲ್ಲರನ್ನೂ ಖಾಯಂ ಮಾಡಿದ್ದಾರು. ಈ ಡಾಕ್ಟರುಗಳಿಗೂ ಬೇರೆ ಡಾಕ್ಟರ್‌ಗಳಿಗೂ ಕೆಲಸ ಮಾಡುವ ರೀತಿಯಲ್ಲಿ ವ್ಯತ್ಯಾಸವಿದೆ. ನನ್ನ ಬಾಯಿಯಲ್ಲಿ ಹೇಳಬಾರದು ಆದರೂ ಹೇಳುತ್ತೇನೆ. ಅನುಸೂಚಿತ ಜಾತಿಗೆ ಸೇರಿರತಕ್ಕ ಡಾಕ್ಟರುಗಳು ಖಾಸಗಿಯಾಗಿ ಪ್ರಾಕ್ಟೀಸ್ ಮಾಡಬಹುದು. ಆದರೆ ಈ ಸಮಾಜದಲ್ಲಿ ಏನು ನ್ಯೂನತೆಗಳಿವೆ ಅದರ ಹಿನ್ನೆಲೆಯಲ್ಲಿ ಇವರು ಸುಲಭವಾಗಿ ಕೆಲಸ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದಲೇ ಯಾರು ಯಾರು ಅನುಸೂಚಿತ ಜಾತಿಗೆ ಸೇರಿರತಕ್ಕ ಡಾಕ್ಟರುಗಳಿದ್ದಾರೆ ಅವರನ್ನು ೧೯೭೮ರಲ್ಲಿ ಖಾಯಂ ಮಾಡುವುದಕ್ಕೆ ಮಂತ್ರಿಮಂಡಲ ನಿರ್ಣಯ ತೆಗೆದುಕೊಂಡಿತು. ಅದೇರೀತಿ ನಿರ್ಣಯವನ್ನು ಈಗಲೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೆ. ೧೯೭೮ನೇ ಇಸವಿಯಲ್ಲಿ ತೀರ್ಮಾನ ತೆಗೆದುಕೊಂಡಿದ್ದರೆ ಮೂರು ವರ್ಷದಿಂದ ೨೦ ವರ್ಷದವರೆಗೆ ಕೆಲಸ ಮಾಡುತ್ತಿರುವವರು ರೆಗ್ಯುಲರೈಸ್ ಆಗಬೇಕಾಗಿತ್ತು. ಆದರೆ ಅವರು ಏತಕ್ಕೆ ಮಾಡಲಿಲ್ಲವೋ ಗೊತ್ತಿಲ್ಲ. ೭೮ರಲ್ಲಿ ಎಲ್ಲರನ್ನೂ ಖಾಯಂ ಮಾಡಿದ್ದರೆ ಇವರೂ ಆಗಬೇಕಾಗಿತ್ತಲ್ಲ. ಏತಕ್ಕಾಗಲಿಲ್ಲ ? ಇಲಾಖೆಯ ಆರೋಗ್ಯ ದೃಷ್ಟಿಯಿಂದ ಸ್ಥಳೀಯ ಅಭ್ಯರ್ಥಿಗಳ ಆರೋಗ್ಯ ದೃಷ್ಟಿಯಿಂದ ಕೆಲವು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಹಲವಾರು ವರ್ಷಗಳಿಂದ ಸ್ಥಳೀಯ ಅಭ್ಯರ್ಥಿಗಳನ್ನಾಗಿ ಉಳಿಸಿಕೊಂಡಿರುವುದು ತಪ್ಪು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಖಾಯಂ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ತಪ್ಪಿಗೆ ಪಟ್ಟಿಯಲ್ಲಿ ಕೊಟ್ಟಿರುವಂತೆ ೩೧೦ ಮಂದಿಯಲ್ಲಿ ೧೪೮ ಮಂದಿ ಅನುಸೂಚಿತ ಜಾತಿ ಮತ್ತು ೫ ಮಂದಿ ಅನುಸೂಚಿತ ಪಂಗಡಗಳವರಿದ್ದಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿರುವ ೩೪ ಮಂದಿಯಲ್ಲಿ ೧೬ ಜನ ಪರಿಶಿಷ್ಟ ಜಾತಿಯವರು ಮತ್ತು ಒಬ್ಬರು ಪರಿಶಿಷ್ಟ ವರ್ಗದವರು ಇದ್ದಾರೆ. ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡಿರತಕ್ಕ ಕಾಲದಲ್ಲಿ ಈ ಎರಡೂ ವರ್ಗದವರಿಗೆ ಶೇಮಾರು ೫೦ ಭಾಗ ದಷ್ಟು ಕೆಲಸ ಕೊಟ್ಟಿದ್ದೇವೆ ತಾವು ಹೇಳಿದ ರೀತಿಯಲ್ಲಿ ಈಗಿನ ಸಮಾಜದಲ್ಲಿ ಅವರು ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕಾಗುವುದಿಲ್ಲ ಎನ್ನುವುದು, ಕೆಲವು ಕಡೆ ಈ ತೊಂದರೆ ಇದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಅವರನ್ನು ಇಷ್ಟು ದಿವಸ ಸ್ಥಳೀಯ ಅಭ್ಯರ್ಥಿಗಳಾಗಿ ಇಡುವುದಕ್ಕೆ ಸಿ ಆಂಡ್ ಆರ್ ರೂಲ್ಸ್‌ನಲ್ಲಿ ಪ್ರಾವಿಷನ್ ಇದೆಯೇ ಎಂದು ಕೇಳಿದ್ದಾರೆ. ಸಿ ಆಂಡ್ ಆರ್ ರೂಲ್ಸ್‌ನಲ್ಲಿ ಇದಕ್ಕೆ ಪ್ರಾವಿಷನ್ ಮಾಡಿರುವುದಿಲ್ಲ. ಆದರೆ ಇಷ್ಟು ವರ್ಷ ಅವರನ್ನು ಸ್ಥಳೀಯ ಅಭ್ಯರ್ಥಿಗಳಾಗಿ ಮುಂದುವರಿಸುವ ಅಗತ್ಯ ಇತ್ತೇ ಎನ್ನುವ ಪ್ರಶ್ನೆ ಇದೆ. ಇಷ್ಟು ವರ್ಷ ಇಟ್ಟುಕೊಳ್ಳುವುದು ಒಳ್ಳೆಯದಲ್ಲ, ಅದಷ್ಟು ಜಾಗ್ರತೆ ಖಾಯಂ ಮಾಡುವುದಕ್ಕೆ ನಾನು ಸರ್ವ ಪ್ರಯತ್ನ ಮಾಡುತ್ತೇನೆ. ಈ ವಿಚಾರದಲ್ಲಿ ಮಾನ್ಯ ಬಸವಲಿಂಗಪ್ಪನವರು ನನ್ನ ಮೇಲೆ, ಸರ್ಕಾರದ ಮೇಲೆ ನಂಬಿಕೆ ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ೨೦ ವರ್ಷದಿಂದ ಇದ್ದವರನ್ನು ಏಕೆ ಖಾಯಂ ಮಾಡಿಲ್ಲ ಎಂದು ಹೇಳಿದರು. ಆಗ ಅನುಸೂಚಿತ ಜಾತಿಗೆ ಸೇರಿರತಕ್ಕ ಪರಿಗೆ ಸರಿಯಾದ ಪ್ರಾತಿನಿಧ್ಯ ಇಲ್ಲ ಎನ್ನುವ ಆಧಾರದ ಮೇಲೆ ಖಾಯಂ ಮಾಡಿದ್ದೆವು. ೧೯೭೮ ರಲ್ಲಿ ನಾವು ಬಿಟ್ಟುಮೇಲೆ ಹೆಚ್ಚು ಕಡಿಮೆ ೯ ವರ್ಷಗಳು ಆಯಿತು. ಆ ೯ ವರ್ಷಗಳಿಂದ ಇವರನ್ನು ಖಾಯಂ ಆಗಿ ತೆಗೆದುಕೊಂಡಿಲ್ಲ. ಬರೀ ಹಂಗಾಮಿಯಾಗಿ ನೇಮಕ ಮಾಡಿದ್ದಾರೆ. ಈ ೧೬೪ ಹಾಗೂ ೫ ಜನರು ಏನು ಇದ್ದಾರೆ ಇವರನ್ನು ವಿಶೇಷವಾಗಿ ಪರಿಗಣಿಸಿ, ಇವರ ಬಗ್ಗೆ ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಂಡು ಇವರನ್ನು ಖಾಯಂ ಮಾಡುತ್ತೀರಾ ?

ಶ್ರೀ ಎಚ್. ಎಲ್. ತಿಮ್ಮೇಗೌಡ.—ಅವರು ಹೇಳಿದ್ದರ ಬಗ್ಗೆ ಪ್ರಯತ್ನ ಮಾಡಿದ್ದೇವೆ. ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಬೇಕೆಂದು ಮಾಡಿದ್ದು ಅದಕ್ಕೆ ವಿವಿಧ ಇಲಾಖೆಗಳಲ್ಲಿ ಒಪ್ಪಿಗೆ ಸಿಗದಿರುವುದರಿಂದ ತಡವಾಗಿದೆ. ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಅದಷ್ಟು ಜಾಗ್ರತೆ ಮಾಡಿ ಇವರನ್ನು ಅದಷ್ಟು ಜಾಗ್ರತೆ ಖಾಯಂ ಮಾಡುವ ಕೆಲಸವನ್ನು ನಾನು ಮಾಡುತ್ತೇನೆ.